## ರಿಫ್

ಇದೊಂದು ಸಾಮಾಜಿಕ ಜಾಲತಾಣ ಸಹಯೋಗಿ ವಿಡಿಯೋ ಆ್ಯಪ್. ವಿಡಿಯೋಗಳನ್ನು ಶೇರ್ ಮಾಡಬಹುದು. ನಿಮಗೆ ಎಷ್ಟು ಬಾರಿ ಬೇಕೋ ಅಷ್ಟು ಸಲ ವಿಡಿಯೋಗಳನ್ನು ಮರುಚಿತ್ರೀಕರಿಸಬಹುದು. ಸರಳವಾದ ಹಾಗೂ ಅಹ್ಲಾದಕರವಾದ ಮೇಲ್ಮೈ ಈ ಆ್ಯಪ್‌ನ ವಿಶೇಷ. ಇದಕ್ಕೆ ಫೇಸ್‌ಬುಕ್ ಖಾತೆ ಅವಶ್ಯಕ. ಐಟ್ಯೂನ್ಸ್ ಆ್ಯಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದಕ್ಕೆ ಐಒಎಸ್ 8 ಆಪರೇಟಿಂಗ್ ವ್ಯವಸ್ಥೆಯ ಅಗತ್ಯವಿದೆ. ಫೇಸ್‌ಬುಕ್‌ಗೆ ಲಾಗಿನ್ ಆದ ನಂತರ ಕ್ಯಾಮೆರಾ ಹಾಗೂ ಮೈಕ್ರೊಫೋನ್‌ಗೆ ಸಂಪರ್ಕ ಕಲ್ಪಿಸುತ್ತದೆ. ವಿಡಿಯೋ ತುಣುಕುಗಳನ್ನು ರಿಫ್‌ಗೆ ಸೇರಿಸಿ. ನಿಮ್ಮ ಸ್ನೇಹಿತರ ಬಳಗವನ್ನೂ ರಿಫ್‌ಗೆ ಸೇರಿಸಿಕೊಳ್ಳಬಹುದು. ಇದು ವಿಡಿಯೋ ತಯಾರಕರು ಹಾಗೂ ಸ್ನೇಹಿತರ ಮಧ್ಯೆ ನಿರಂತರ ಸಂವಹನದ ರೀತಿಯಲ್ಲಿ ಮುಂದುವರಿಯುತ್ತದೆ.




## ಔಟ್‌ಲುಕ್ ಆ್ಯಪ್‌ಗೆ ಹೊಸ ಲುಕ್

ಮೈಕ್ರೋಸಾಫ್ಟ್ ಆರಂಭಿಸಿರುವ ಔಟ್‌ಲುಕ್ ಆ್ಯಪ್‌ಗೆ ಕೆಲವು ಹೊಸ ಅಂಶಗಳನ್ನು ಸೇರಿಸಲಾಗಿದೆ. ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಎರಡೂ ಸಿಸ್ಟಮ್‌ಗಳಲ್ಲಿ ಇದು ಲಭ್ಯವಿದೆ. ಕ್ಯಾಲೆಂಡರ್‌ನಲ್ಲಿ ಈಗ ಮೂರು ದಿನಗಳ ವಿವರಗಳನ್ನು ನೋಡಬಹುದು. ಯಾವುದಾದರೂ ಮೀಟಿಂಗ್ ರದ್ದಾದರೆ ಕ್ಯಾಲೆಂಡರ್‌ನಲ್ಲೂ ತೆಗೆದು ಹಾಕಬಹುದು. ಅಡ್ರೆಸ್ ಬುಕ್‌ನಲ್ಲೂ ಕೆಲವು ಬದಲಾವಣೆ ಮಾಡಲಾಗಿದ್ದು ಪ್ರತಿಯೊಂದು ಕಾಂಟ್ಯಾಕ್ಟ್‌ಗೂ ನಿಮಗೆ ಬೇಕಾದ ಫೀಚರ್‌ಗಳನ್ನು ಸೇರಿಸಬಹುದು. ಅಂದರೆ ಇಮೇಲ್, ನಿಮ್ಮ ಹಿಂದಿನ ಸಂವಹನ, ಅವರಿದ್ದ ಸ್ಥಳಕ್ಕೆ ಮ್ಯಾಪ್ ಮೊದಲಾದ ಅಂಶಗಳನ್ನು ಸಿದ್ಧಪಡಿಸಬಹುದು.




## ಇನ್‌ಸ್ಟಾಗ್ರಾಮಿನ ಲೇಔಟ್

ಇನ್‌ಸ್ಟಾಗ್ರಾಮಿನಲ್ಲಿ ಒಂದಕ್ಕಿಂತ ಹೆಚ್ಚು ಫೋಟೋಗಳನ್ನು ಹಾಕುವಾಗ ಯಾವುದೇ ಮೂರನೇ ಪಾರ್ಟಿ ಆ್ಯಪ್ ಈಗ ಅಗತ್ಯವಿಲ್ಲ. ಅದರ ಲೇಔಟ್ ಆ್ಯಪ್ ಈ ಕೆಲಸವನ್ನು ಆರಾಮವಾಗಿ ಮಾಡುತ್ತದೆ. ಫೋಟೋಗಳನ್ನು ಕೊಲಾಜ್ ಮಾಡುವಾಗ ಒಳ್ಳೆಯ ಲೇಔಟ್ ಇದರಲ್ಲಿ ಲಭ್ಯ. ಐಫೋನ್ ಹಾಗೂ ಐಪ್ಯಾಡ್‌ನ ಈ ಆ್ಯಪ್‌ಗೆ ಡೌನ್‌ಲೋಡ್ ಮಾಡಿಕೊಂಡ ನಂತರ ಲಾಗಿನ್ ಆಗುವ ಅವಶ್ಯಕತೆಯಿಲ್ಲ. ಲೇಔಟ್ ಕೆಳಗಡೆ ನಿಮ್ಮ ಫೋನ್‌ನಲ್ಲಿರುವ ಎಲ್ಲಾ ಫೋಟೋಗಳು ಕಾಣಿಸಿಕೊಳ್ಳುತ್ತವೆ. 9 ಫೋಟೋಗಳವರೆಗೂ ನೀವು ನಿಮಗೆ ಬೇಕಾದಂತೆ ಲೇಔಟ್‌ನಲ್ಲಿ ಜೋಡಿಸಬಹುದು.




## ಟ್ವಿಟರ್ ಪೆರಿಸ್ಕೋಪ್

ಐಫೋನ್‌ನ ಈ ಆ್ಯಪ್‌ನಿಂದ ಲೈವ್ ವಿಡಿಯೋ ಚಿತ್ರೀಕರಿಸಿ ಕಾಪಿಡಬಹುದು. ಶೇರ್ ಮಾಡಿಕೊಳ್ಳಬಹುದು. ಇದಕ್ಕೆ ಟ್ವಿಟರ್ ಖಾತೆಯ ಅವಶ್ಯಕತೆಯಿದೆ. ಈ ಆ್ಯಪ್ ಶುರು ಮಾಡಿದಾಗ ಇದರ ಬಗ್ಗೆ ಸೂಚನೆಗಳು ಕಾಣಿಸಿಕೊಳ್ಳುತ್ತವೆ. ಕ್ಯಾಮೆರಾದಲ್ಲಿ ಇರುವ ಹಲವು ವಿಶೇಷಗಳನ್ನು ಅಂದರೆ ಮೈಕ್ರೋಫೋನ್, ಸ್ಥಳಗಳ ವಿವರಗಳನ್ನು ಹೇಗೆ ಚಾಲೂ ಮಾಡಬಹುದು ಎಂಬುದರ ಬಗ್ಗೆ ನಿರ್ದೇಶನ ನೀಡುತ್ತದೆ. ಇದಕ್ಕೆ ಸ್ನೇಹಿತರನ್ನು ಸೇರಿಸಿಕೊಳ್ಳಬಹುದು. ಅವರು ಸೇರಿದಾಗ ಸೂಚನೆ ಕೂಡಾ ನಿಮಗೆ ಬರುತ್ತದೆ.




■ ಎಸ್. ತುಂಬೆ